Dd-367
T.P-2

(1)

Reg B G 155

6-9-1968

SATYAVADI Daily, MYSORE 4

52 nd Year of Publication

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅವರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಸ್. ಕೃಷ್ಣರಾವ್ [2 ಪೈಸೆ

ವಿಧಾನ ಸಬೆಯಲಿ ಸಭಾಪರಿತ್ಯಾಗ

ಪ್ರಾರ್ಥನಾ ಫಲ

ಹೈದರಾಬಾದು— ನಮ್ಮ ಪ್ರಾರ್ಥನೆಗೆ ಕರುಣಿಸಿ, ದೇವರು ಮಳೆಯನ್ನು ಕೃಪೆ ಮಾಡಿದ್ದಾನೆ ಎಂದು ದೇವಾಲಯಗಳ ಮಂತ್ರಿ ಶ್ರೀ ರಾಮಲಿಂಗಂರಾಜು ಹೇಳಿದರು – ಮಳೆಗಾಗಿ ದೇವಾಲಯಗಳಲ್ಲಿ ಪೂಜೆಮತ್ತು ನಾರಾಯಣ ಸೆಪ್ಟಂಬರು 2 ರಿಂದ ನಡೆಸಲಾಗುತ್ತಿತ್ತು — ನಾವು ದೇವರನ್ನು ಮರೆತರೇ ಈ ಎಲ್ಲಾ ವಿಪತ್ತುಗಳು ಎಂದೂ ಅವರು ಹೇಳಿದರು.

ವಿಶಾಖಪಟ್ಟಣಕ್ಕೆ ಗೋದಾವರಿ ನೀರು

ವಿಶಾಖಪಟ್ಟಣ— 150 ನಾಲೆ ತೋಡಿ, ಗೋದಾವರಿ ನೀರನ್ನು ವಿಶಾಖಪಟ್ಟಣಕ್ಕೆ ತರಲು ರೂ. 25 ಸ್ಕೀಮನ್ನು ಕೇಂದ್ರ ನಿರಾವರಿ ಮಂತ್ರಿ ಸಲಹೆ ಮಾಡಿರುವರು.

ಶೀತಲ ಯುದ್ಧ

ನವದೆಹಲಿ— ಜೆಕೊಸ್ಲವಾಕ್‌ನಲ್ಲಿನ ನಡುವಳಿಕೆ ಶೀತಲ ಯುದ್ಧವನ್ನು ಪುನರುತ್ಥಾನ ಮಾಡಿದೆ ಎಂದು ಪ್ರಧಾನಿಯವರು ಹೇಳಿದರು.

●

ಹೊಡೆದಾಟ

ಶಿವಮೊಗ್ಗ— ರಿಪ್ಪನ್‌ಪೇಟೆಯಲ್ಲಿ ಎರಡು ಗುಂಪುಗಳಲ್ಲಿ ಹೊಡೆದಾಟವಾಗಿ 12 ಜನರು ಗಾಯಗೊಂಡರು : ಪೋಲೀಸರು ಪರಿಸ್ಥಿಯನ್ನು ಹತೋಟಿಗೆ ತಂದು ಹಲವರನ್ನು ದಸ್ತಗಿರಿಮಾಡಿದರು.

★

ವಿಧಾನ ಪರಿಷತ್ತು

ಬೆಂಗಳೂರು— ಶ್ರೀ ಶಾಂತಪ್ಪ ಶೆಟ್ಟಿ (ಕಾಂ) ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರು.

ಡಾಕ್ಟರ್ ಇಲ್ಲ

ಬೆಂಗಳೂರು— ಮೂಡಬಿದ್ರೆ ತಾಲೂಕು ಆಸ್ಪತ್ರೆಯಲ್ಲಿ ಡಾಕ್ಟರೇ ಇಲ್ಲವೆಂದು ಶಾಸನಸಭೆಯಲ್ಲಿ ಸದಸ್ಯರೊಬ್ಬರು ತಿಳಿಸಿದಾಗ, ಸಾಧ್ಯವಾದಷ್ಟು ಅಲ್ಲಿಗೆ ಡಾಕ್ಟರನ್ನು ಕಳುಹಿಸುವದಾಗಿ ತಿಳಿಸಲಾಯಿತು.

ಅಪಾರ ನ್ಯಾಯಜಿಲೆ ಅಂಗಡಿಗಳು

ಹೈದರಾಬಾದು— ಅನಾವೃಷ್ಟಿಯಿಂದ ಸಂಕಟಕ್ಕೀಡಾಗಿರುವವರಿಗೆ ಆಹಾರಧಾನ್ಯ ಸರಬರಾಜಿಗೆ ಸಾವಿರಾರು ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಲು ಸರ್ಕಾರ ನಿರ್ಧರಿಸಿದೆ.

★

ಪ್ರಖಂಡ ದಾನಾ

ಪಾಟ್ನಾ— ಗಯಾ ಜಿಲ್ಲೆಯ ಪಾಕ್ರಿ ಬರ್ವಾ ಬ್ಲಾಕನ್ನು ಪ್ರಖಂಡ ದಾನವಾಗಿ ಕೊಡಲಾಗಿರುವದೆಂದು ಸರ್ವೋದಯ ಪ್ರಕಾಶನ ಸಮಿತಿಯ ವರದಿ.

★

ಗೆಸ್ಟ್ ಕಂಟ್ರೋಲ್ ಆಜ್ಞೆ

ಬೆಂಗಳೂರು— ಸಾಮಾಜಿಕ ಮತ್ತಿತರ ಸಮಾರಂಭಗಳಲ್ಲಿ 150 ಜನರವರೆಗೂ ನಿತ್ತು ವಿವಾಹ ಮತ್ತು ಶವಸಂಬಂಧದಲ್ಲಿ 300 ಮಂದಿ ವರೆಗೂ ಇರುವಂತೆ ಗೆಸ್ಟ್ ಕಂಟ್ರೋಲ್ ಆರ್ಡರು ಸಡಲಿಸಲಾಗಿದೆ.

★

ಅಭಾವ ಪರಿಹಾರ

ಬೆಂಗಳೂರು— ಅಭಾವ ಪರಿಹಾರದ ಮಂತ್ರಿಮಂಡಲದಲ್ಲಿ ಮಾಡಿರುವ ಪರ್ಯಾಲೋಚನೆಯನ್ನು ಶಾಸನಸಭೆಗೆ ತಿಳಿಸುವದಾಗಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನಿನ್ನೆ ತಿಳಿಸಿದರು.

ಶಾಸನಸಭೆಯಲ್ಲಿ

ಬೆಂಗಳೂರು— ಶ್ರೀ ಎಸ್. ಕೋಥಾ ಪಾಲೆ (ಕಾಂ) ರವರು ಸ್ಪೀಕರಾಗಿ ನಿನ್ನೆ ಆಯ್ಕೆಯಾದರು – ಆಗ ವಿರೋಧ ಸದಸ್ಯರಾರೂ ಇರಲಿಲ್ಲ – ಸರಕಾರದ ನೋಟಿಫಿಕೇಷನ್ ಸಭೆಯಲ್ಲಿ ತರುಪದನ್ನು ಪ್ರತಿಭಟಿಸಿ ಸಭಾಪರಿತ್ಯಾಗ ಮಾಡಿದರು — ಹೊಸ ಸ್ಪೀಕರರು ವಿರೋಧ ಸದಸ್ಯರ್ಯಾರೂ ಇಲ್ಲದಿರುವದನ್ನು ಮನಸ್ಸಿಗೆ ತೆಗೆದುಕೊಂಡು, ಅವರ ಹಕ್ಕುಬಾಧ್ಯತೆಯನ್ನು ಎತ್ತಿಹಿಡಿಯುವದಾಗಿ ಅವರ ಗೈರುಹಾಜರಿನಲ್ಲೇ ಭರವಸೆ ನೀಡಿದರು.

ವೋಟು ಎಣಿಕೆ ಸ್ವಾರಸ್ಯ

ನವದೆಹಲಿ— ಶ್ರೀ ರಾಮೇಶ್ವರಾನಂದರು ಸುಪ್ರೀಂ ಕೋರ್ಟ್‌ನಲ್ಲಿ ಹಾಕಿದ ಜಾನಾವಣಾ ಅಪೀಲು ಸಂಬಂಧವಾಗಿ, ವೋಟುಗಳ ಎಣಿಕೆ ಮತ್ತೆ ನಿನ್ನೆ ಪ್ರಾರಂಭವಾದಾಗ, ಮುಖ್ಯ ನ್ಯಾಯಾಧೀಶರು ವೋಟಿನ ಪೆಟ್ಟಿಗೆ ತೆರೆದು ನೋಡಿದಾಗ "ಮೊದಲನೆ ಪೆಟ್ಟಿಯಲ್ಲಿ 50 ವೋಟುಗಳ ಕಂತೆಯ ಮೇಲೆ, 50 ಓಟುಗಳು ಕಾಂಗ್ರೆಸ್ಸಿಗೆ ಎಂತಿತ್ತು ; ಆದರೆ ಕಂತೆ ಬಿಚ್ಚಿದಾಗ, ಕಾಂಗ್ರೆಸ್ಸಿಗೆ 1 ಓಟು ಜನಸಂಘಕ್ಕೆ 49 ಓಟುಗಳಿದ್ದುದು ಕಂಡುಬಂದಿತು.

●

ಬಹಿರಾಕಾಶದವರೇ

ಬುನನಸ್ ಐರಸ್— ಹಾರಾಡುವ ತಟ್ಟಿ ಇಳಿದುದನ್ನೂ ಬಹಿರಾಕಾಶದ ಪರಿಕೀಯ್ತರನ್ನೂ ತಾವು ಕಂಡುದಾಗಿ ಕೆಲವರು ಹೇಳಿರುವರು – ಆ ಪರಕೀಯರು ಕೂದಲು ಕಿವಿ ಇಲ್ಲದೆ, ದೊಡ್ಡ ಬಾಯಿ ಉದ್ದದ ಹಲ್ಲುಗಳನ್ನು ಹೊಂದಿದ್ದರನ್ನಲಾಗಿದೆ.

★

ವುಡ್‌ಲಾಂಡ್ ದಿಗ್ವಿಜಯ 5ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫಜ್ರ

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— ಜನಪ್ರಿಯ 2 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

ಮೈಸೂರು ದಸರಾ ವಸ್ತು ಪ್ರದರ್ಶನ 1968

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ತಿಳಿವಳಿಕೆಗೆ ಬಸ್ಯೆ ಪ್ರಕಟಪಡಿಸುವುದೇನೆಂದರೆ:— ಈ ಕೆಳಗೆ ನಮೂದಿಸಿರುವಬಾಬುಗಳಿಗಾಗಿ ಮೈಸೂರು ದಸರಾ ವಸ್ತು ಪ್ರದರ್ಶನದ ಸಮಿತಿ ಸೆಕ್ರೆಟರಿಯವರು ಮೊಹರಾದ ಪ್ರತ್ಯೇಕ ಟೆಂಡರ್‌ಗಳನ್ನು ತಾ॥ 7–9–1968 ರಲ್ಲು ಮಧ್ಯಾಹ್ನ 2 ಘಂಟೆವರೆವಿಗೆ ಸ್ವೀಕರಿಸುತ್ತಾರೆ. ಈ ಕೆಳಗೆ ಕೊಟ್ಟಿರುವ ಐಟಂಗಳಿಗೆ ತಮ್ಮ ಅತಿಹೆಚ್ಚಿನ ಕೋಟೇಷನ್‌ಗಳನ್ನು ಕೊಡುವ ಮೂಲಕ ಆಪೆಕ್ಷಿಸುವ ಜನರು ತಮ್ಮ ಟೆಂಡರ್ ಸಲ್ಲಿಸಬಹುದು. ಸೀಲಾದ ಟೆಂಡರ್‌ಗಳನ್ನು ಟೆಂಡರ್‌ಗಾಗಿ .... ಎಂದು ಹೆಸರು ಬರೆಯಬೇಕು [ನಿರ್ದಿಷ್ಟವಾಗಿ ಯಾವ ಐಟಂಗೆ ಎಂದು ಸೂಚಿಸುವುದು.] ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ ಬರೆದು ಲಕೋಟೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಹೆಸರು ಇರಬೇಕು ಎ. ಬಿ. ಸಿ. ಮತ್ತು ಎಫ್ ಬ್ಲಾಕ್‌ಗಳಲ್ಲಿರುವ ಸ್ಟಾಲ್‌ಗಳಿಗೆ ಪ್ರತಿಯೊಂದಕ್ಕೂ ರೂ. 300/–ರ ನಗದು ಠೇವಣಿ ಪ್ರತಿಯೊಂದು ಟೆಂಡರ್‌ನೊಡನೆ ಇರತಕ್ಕದ್ದು ಇತರ ಐಟಂಗಳಿಗೆ ಸ್ಟಾಲ್ ವೊಂದಕ್ಕೆ ರಿಜಿಸ್ಟ್ರೇಷನ್ ಶುಲ್ಕ ರೂ. 5 ರೊಡನೆ (ವಾಪಸು ಮಾಡುವುದಿಲ್ಲ) ರೂ. 200 ಠೇವಣಿ ಕೊಡತಕ್ಕದ್ದು. ಕೆಲಸದ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಆಂಚೆ ಮೂಲಕ ಅಥವಾ ಖುದ್ದಾಗಿ ನಿಗದಿ ಆದ ದಿನ ಮತ್ತು ವೇಳೆ ಅಥವಾ ಅದಕ್ಕೆ ಮುಂಚೆ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು. ಟೆಂಡರ್ ಅಂಗೀಕೃತವಾದ ನಂತರ ಟೆಂಡರ್‌ದಾರರು ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಪಾವತಿ ಮಾಡಿರುವ ಸರ್ಟಿಫಿಕೇಟ್ ಕೊಡತಕ್ಕದ್ದು. ನೆಗ್ರಿ–ಗೋ–ರೌಂಡ್ ಟೆಂಡರ್‌ದಾರರು ಮನರಂಜನೆ ತೆರಿಗೆ ಪಾವತಿ ಮಾಡಬೇಕು. ಟೆಂಡರ್ ಅಂಗೀಕೃತವಾಯಿತೆಂಬ ಸಮಾಚಾರ ತಲುಪಿದ 3 ದಿನಗಳಲ್ಲಿ ಯಶಸ್ವಿ ಆದ ಟೆಂಡರ್‌ದಾರರು ಸ್ಟಾಲ್ ವೊಂದಕ್ಕೆ ಅಥವಾ ಸ್ಥಳಕ್ಕೆ ಪ್ರತಿಯೊಂದು ಸಂದರ್ಭದಲ್ಲೂ ವಿದ್ಯುತ್ ಮತ್ತು ಇತರ ವೆಚ್ಚಗಳಿಗಾಗಿ ರೂ. 100/— ಎಚ್ಚರಿಕೆ ಹಣ ಠೇವಣಿಯೊಡನೆ ಟೆಂಡರ್ ಣಹವನ್ನು ಪೂರ್ವವಾಗಿ ಪಾವತಿ ಮಾಡಬೇಕು. ಸಾಮಾನ್ಯ ಸ್ಥಾಪನೆಗಳನ್ನಲ್ಲದೆ ನೀಡಿರುವ ರೂಲ್ಸು ರೆಗ್ಯುಲೇಷನ್‌ಗಳಿಗೆ ಯಶಸ್ವಿ ಟೆಂಡರ್‌ದಾರರು ಬದ್ಧರ. ಪೂರ್ಣ ವಿವರಗಳಿಗಾಗಿ ಮತ್ತು ಇತರ ಸರತ್ತುಗಳಿಗಾಗಿ ಕೆಲಸದ ವೇಳೆಗಳಲ್ಲಿ ಈ ಕೆಳಗೆ ಸಹಿ ಮಾಡಿರುವವರೊಡನೆ ವ್ಯವಹರಿಸಿ. ಯಾವುದೇ ಕಾರಣ ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಗೆ ಇದೆ.

(1) ಮೆಡಿಕಲ್ ಕಾಲೇಜ್ ಕ್ಯಾಂಟೀನಲ್ಲಿ ಸಸ್ಯಾಹಾರ ರೆಸ್ಟೋರೆಂಟ್ ನಡೆಸುವುದು. (2) ಪ್ರಧಾನ ಕಟ್ಟಡದ ಬಡಾಯಿಸಿದ ಪ್ರದೇಶದಲ್ಲಿ ಸಸ್ಯಾಹಾರ ರೆಸ್ಟೋರೆಂಟ್ ನಡೆಸುವುದು. (3) ಜೆ. ಕೆ. ಗ್ರೌಂಡ್ಸ್‌ನಲ್ಲಿ ಸಸ್ಯಾಹಾರ ರೆಸ್ಟೋರೆಂಟ್ ನಡೆಸುವುದು. (4) ಎ ಬ್ಲಾಕ್‌ನಲ್ಲಿ ಸ್ಟಾಲ್ [1 ರಿಂದ 27] ಬಿ. ಬ್ಲಾಕ್ [5 ರಿಂದ 37] ಸಿ. ಬ್ಲಾಕ್ [8 ರಿಂದ 37] ಇ. ಬ್ಲಾಕ್ [10 ರಿಂದ 29] ಡಿ. 33 ಮತ್ತು ಎಲ್ 1. [ಪ್ರತಿಯೊಂದು ಸ್ಟಾಲ್‌ಗೆ ಮಾತ್ರ ಟೆಂಡರ್ ಸಲ್ಲಿಸತಕ್ಕದ್ದು] (5) ಜೆ ಮತ್ತು ಕೆ, ಟಿ ಮತ್ತು ಪಿ, ಎಕ್ಸ್ ಮತ್ತು ವೈ ಸ್ಟಾಲುಗಳು, ಟಿ 1, ಜೆ 1, ಪಿ 1, ಕೆ 1, ಎಕ್ಸ್ 1 ಮತ್ತು ವೈ 1 ಇದರ ಉತ್ತರ ತುದಿಗಳು, ಎಕ್ಸ್, ವೈ, ಪಿ, ಟಿ, ಜೆ ಮತ್ತು ಕೆ. ಬ್ಲಾಕ್‌ಗಳ ನಂ. 13 ಮತ್ತು 11 ರ ಮೂಲೆ ಸ್ಟಾಲ್‌ಗಳು, ಎಂ 3 ರಿಂದ 7 [ಟೀ ಮತ್ತು ಕಾಫಿ ಬೋರ್ಡ್ ಸ್ಟಾಲುಗಳು] (6) ವಸ್ತು-ಪ್ರದರ್ಶನ ಅವಧಿಯಲ್ಲಿ ಕಚೇರಿಯ ಬಳಕೆಗಾಗಿ ಮೈಲೋಮೀಟರ್ ಇರುವ ವ್ಯಾನ್ ಅಥವಾ ಕಾರ್ ಬಾಡಿಗೆಗೆ ಸರಬರಾಜು ಮಾಡುವುದು. (7) 1968 ರ ವಸ್ತು-ಪ್ರದರ್ಶನದ ದಿನ ನಿತ್ಯದ ಚಟುವಟಿಕೆಗಳನ್ನು ಪ್ರಚಾರ ಮಾಡಲು ಮೈಕ್ ಮತ್ತು ಲೌಡ್ ಸ್ಪೀಕರ್ ಇರುವ ವ್ಯಾನ್ ಅಥವಾ ಕಾರ್ ಸರಬರಾಜು ಮಾಡುವುದು. (8) ಮೆರ್ರಿ–ಗೋ–ರೌಂಡ್ ನಡೆಸುವುದು. (9) ಸೈಕಲ್ ಸ್ಟ್ಯಾಂಡ್ ನಡೆಸುವುದು. (10) ಸ್ಟ್ಯಾಂಡ್ ಸಮೇತ ಪೆಟ್ರೋಮ್ಯಾಕ್ಸ್ ಲೈಟುಗಳನ್ನು ಸರಬರಾಜು ಮಾಡುವುದು. (11) [ಎ] ಸ್ಪ್ರಿಂಕ್ಲಿಸ್ಟ ಯಂತ್ರಗಳು [ಬಿ] ಸ್ವಯಂ ಹಸ್ತ ಸಾಮಾಗ್ರಿಗಳು, [ಸಿ] ಕೂಕದ ಯಂತ್ರ ವ್ಯವಸ್ಥೆ ಮಾಡುವುದು. (12 [ಎ] ಸರ್ವಸುಸಜ್ಜಿತ ಮತ್ತು ಆಪರೇಟರ್‌ನ್ನು ಹೊಂದಿದ 4 ಮೈಕ್‌ಗಳು, 3 ಬಾಕ್ಸ್ ಸ್ಪೀಕರ್‌ಗಳು ಮತ್ತು 1 ಸ್ಪೀಕರ್ ಹಾರ್ನ್‌ಗಳು ಮುಂತಾದುವನ್ನು ಪುರಭವನದಲ್ಲಿ ವ್ಯವಸ್ಥೆಗೊಳಿಸುವುದು. (13) [ಬಿ] 2೦–9–1968ರಿಂದ ಆರಂಭವಾಗುವ ವಸ್ತು ಪ್ರದರ್ಶನ ಅವಧಿಯಲ್ಲಿ ಅಗತ್ಯವಿರುವ ಎಲ್ಲಾ ಉಪಕರಣಗಳೊಂದಿಗೆ, ಫಿಟಿಂಗ್‌ಗಳು ಆಪರೇಟರ್ ಮುಂತಾದವುಗಳಸಮೇತ ಜೆ.ಕೆ. ಪ್ರದೇಶದ ರಂಗಮಂಟಪದಲ್ಲಿ ನಾಲ್ಕು ಮೈಕ್‌ಗಳು, ಎರಡು ಬಾಕ್ಸ್ ಸ್ಪೀಕರ್‌ಗಳು, ಮತ್ತು ಆರು ಹಾರನ್ ಸ್ಪೀಕರ್‌ಗಳು ಹೊಂದಿರುವ ಲೌಡ್ ಸ್ಪೀಕರ್ ವ್ಯವಸ್ಥೆಗೊಳಿಸುವುದು, (14) ಸಿ ಎಫ್ ಟಿ ಆರ್ ಐ ಪಬ್ಲಿಸಿಟಿ ಆಫೀಸ್ ಹತ್ತಿರ, ಕ್ಯೂ ಮತ್ತು ಜಿ ಬ್ಲಾಕ್‌ಗಳು, ಫೈರ್ ಬ್ರಿಗೇಡ್ ಹಿಂಭಾಗ ಬಹಿರಂಗ ಪ್ರದೇಶಗಳು, ಹೆಚ್ ಬ್ಲಾಕ್ ಮತ್ತು ಬಹಿರಂಗ ಪ್ರದೇಶಗಳ ಎದುರಿನ ಮೂಲೆ ಸ್ಥಳ, ದ್ವೀಪ [1 ರಿಂದ 3].

ಸೂಚನೆ: ಯಾವುದೇ ಸ್ಟಾಲ್‌ಗೆ/ಬಹಿರಂಗ ಪ್ರದೇಶಗಳಿಗೆ ಟೆಂಡರ್‌ಗಳು ಬರದೆ ಇದ್ದರೆ ಮತ್ತು ಈಗಾಗಲೇ ಬಂದಿರುವ ಟೆಂಡರ್‌ಗಳು ನಿರಾಕರಿಸಲ್ಪಟ್ಟಿದ್ದರೆ/ಒಪ್ಪಿತವಾಗದಿದ್ದರೆ/ಬಹಿರಂಗ ಹರಾಜು ಮೂಲಕ 12–9–1968 ರ ಮಧ್ಯಾಹ್ನ 3 ಘಂಟೆಗೆ ವಸ್ತು ಪ್ರದರ್ಶನ ಪ್ರದೇಶದಲ್ಲಿ ಕಡೆಯದಾಗಿ ವಿಲೆ ಮಾಡಲಾಗುವುದು.

ಸಹಿ/ಆರ್. ರಾಜಣ್ಣ,
ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ ಸಮಿತಿ,
ಮೈಸೂರು.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ತ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಆವರಲ್ಲಿ ಸಾಪ್–ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಸತ್ಯವಾದಿ ” ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೇಕಾಗಿ ವಿನಂತಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ ‘ ಸತ್ಯವಾದಿ ’
ಚಾಮರಾಜಪುರಂ, ಮೈಸೂರು 4.

Protect the Cow

★

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharmapracharc Nirata M S Krishna Rao (Proprietor) at the Satyavadi Press Chamarajapuram, Mysore-4

ನೆರವಿನ ನಿರೀಕ್ಷೆಯಿಲ್ಲ

ನವದೆಹಲಿ— ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯಿಂ ಸಾಧಾರಣವಾಗಿ ಭಾರತವು ಪಡೆಯುವ 200 ಮಿಲಿಯ ಡಾಲರು ನೆರವು ಈ ವರ್ಷ ದೊರೆವ ನಿರೀಕ್ಷೆಯಿಲ್ಲ.

★

ನಾವು ಮಾತನಾಡುವದೆಷ್ಟು !

ನಾವು ದಿನದಲ್ಲಿ 16 ಗಂಟೆ ಎಚ್ಚರದಿಂದಿದ್ದರೆ, 3 ಗಂಟೆ 20 ನಿಮಿಷ ಮಾತನಾಡುವೆನೆಂದೂ, ನಿಮಿಷಕ್ಕೆ 150 ಮಾತುಗಳಂತೆ ಆಡುವೆನೆಂದೂ, ಅಂದರೆ ದಿನಕ್ಕೆ 30000 ಮಾತುಗಳನ್ನಾಡುವೆನೆಂದೂ ರಷ್ಯಾ ನಿಪುಣನೊಬ್ಬನ ಲೆಕ್ಕಾಚಾರ !